ಪಿ.ಡಬ್ಲೂಃ 3

<u>ದಿನಾಂಕಃ **27.09.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಪಾಟೀ ಸವಾಲು:- ಪ್ರತಿವಾದಿ ನಂ.1 ಮತ್ತು 2 ರವರ ಪರವಾಗಿ Sri. JDD, ವಕೀಲರಿಂದ</u>

1. 2 ಮತ್ತು 3 ನೇ ವಾದಿಯರು ನನಗೆ ಸಂಬಂಧಿಕರು ಅಲ್ಲ. ವಾದಿಯರು ಯಾವ ರೀತಿ ಪರಿಚಯ ಎಂದು ಕೇಳಲು ಸಾಕ್ಷಿಯು ನಮಗೆ ಬಂದು ಸಾಕ್ಷಿ ನೀಡಲು ಕೇಳಿದ್ದು, ನಾನು ಸಾಕ್ಷಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ದಾವೆಯನ್ನು ನಾನೇ ಮಾಡಿರುತ್ತೇನೆ. ಜಮೀನು ನನ್ನದು ಎಂದು ಕೋರಿ ದಾವೆ ಮಾಡಿರುತ್ತೇನೆ. ದಾವೆಯನ್ನು ನಾನು ಗಂಗಪ್ಪ ಗಟ್ಟರಡ್ಡಿಹಾಳ ರವರ ಮೇಲೆ ಮಾಡಿರುತ್ತೇನೆ.

2. ಈ ಪ್ರಕರಣದ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ದಾವಾ ಆಸ್ತಿಯ ಸರ್ವೇ ನಂ./3/3 ಇರುತ್ತದೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 7 ಎಕರೆ 11 ಗುಂಟೆ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೋಡಿರುತ್ತೇನೆ. ದಾಖಲೆಗಳ ನಿಖರವಾದ ವಿವರ ನನಗೆ ಹೇಳಲು ಬರುವುದಿಲ್ಲ. ಸರ್ವೇ ನಂ.3/3 ಒಟ್ಟಾರೆ 12 ಎಕರೆ ಆಸ್ತಿ ಎಂದರೆ ಸರಿ. ದಿಃ 02.03.2002 ರಂದು ಪಕ್ಕಿರಪ್ಪ ಗಟ್ಟರಡ್ಡಿಹಾಳ ರವರು ನೀಲಪ್ಪ ಮಹದೇವಪ್ಪ ಬಡಿಗೇರ ಎನ್ನುವವರಿಗೆ ಉತ್ತರ ಭಾಗದ 2 ಎಕರೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

3. ಪಕ್ಕಿರಪ್ಪ ಸರ್ವೇ ನಂ.3/3 ರ ದಕ್ಷಿಣ ಭಾಗದ 7 ಎಕರೆ 31 ಗುಂಟೆ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಪಕ್ಕಿರಪ್ಪ ತನ್ನ ಹೆಸರಿನಲ್ಲಿ ಖಾತೆ ಹೊಂದಿದ್ದರಿಂದ 1 ಮತ್ತು 2 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಮಲಕಾಜಪ್ಪ ಬಹಳ ವರ್ಷಗಳ ಹಿಂದೆ ಮಾರಣ ಹೊಂದಿರುತ್ತಾನೆ.

4. ಮಲಕಾಜಪ್ಪ ಮರಣ ಹೊಂದಿದ ನಂತರ 1971 ರಲ್ಲಿ ಪಕ್ಕಿರಪ್ಪನ ಹೆಸರಿನಲ್ಲಿ ವಾರಸಾ ಪ್ರಕಾರ ಆಸ್ತಿಯು ಪರಿವರ್ತನೆಯಾಗಿದೆ ಎಂದರೆ ಸರಿ. ದಾವಾ ಆಸ್ತಿಯನ್ನು ಮಾರಾಟ ಮಾಡುವ ದಿನಾಂದವರೆಗೆ ಪಕ್ಕಿರಪ್ಪನ ಹೆಸರಿನಲ್ಲಿ ಪಹಣಿ ಪತ್ರಿಕೆಯು ಇತ್ತು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯು ಖರೀದಿಸಿದ ನಂತರ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯ ಮಾಲೀಕರು ವಾದಿಯರು ಎಂದು ತೋರಿಸಲು ನಾನು ದಾಖಲೆಗಳನ್ನು ನೋಡಿರುತ್ತೇನೆ. ಮಲಕಾಜಪ್ಪನವರಿಗೆ 5 ಜನ ಮಕ್ಕಳು ಇರುತ್ತಾರೆ. ಮಲಕಾಜಪ್ಪ ತೀರಿಕೊಂಡ ನಂತರ ಅವರ ಮಕ್ಕಳು ಎಷ್ಟು ವರ್ಷ ಕೂಡಿ ಇದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾನು ಸಣ್ಣವನು ಇದ್ದು ಹೇಳಲು ಬರುವುದಿಲ್ಲ, ಸಾಕ್ಷಿಯು ಪುನಃ ಮುಂದುವರೆದು ಕಳೆದ 20 ವರ್ಷಗಳಿಂದ ಬೇರೆ ಆಗಿದ್ದಾರೆ ಎಂದು ನುಡಿಯುತ್ತಾರೆ. ಮಲಕಾಜಪ್ಪನ ಮಕ್ಕಳು ಕಳೆದ 20 ವರ್ಷಗಳಿಂದ ಬೇರೆ ಬೇರೆಯಾಗಿ ವಹಿವಾಟು ಮಾಡುತ್ತಾರೆ ಎಂದರೆ ಸರಿ.

6. ದಾವಾ ಆಸ್ತಿಯ ಕಬ್ಜೆಯಲ್ಲಿ 1 ಮತ್ತು 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಉತ್ತರ ಭಾಗದ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ದಾವೆ ಮಾಡಿದ್ದಾರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಉಳಿದ ಆಸ್ತಿಗಳ ಬಗ್ಗೆ ದಾವೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. 1 ಮತ್ತು 2 ನೇ ಪ್ರತಿವಾದಿಗೆ ದಾವಾ ಆಸ್ತಿ ಮಾರಾಟವಾಗಿರುವ ವಿಚಾರ ತಿಳಿದಿದ್ದರು ವಾದಿಯರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ಉದ್ದೇಶಪೂರ್ವಕವಾಗಿ 1 ಮತ್ತು 2 ನೇ ಪ್ರತಿವಾದಿಯರ ಮೇಲೆ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸಿದ ನಂತರ ಸರ್ಕಾರದವರು ಫಲಾನುಭವಿಗಳಿಗೆ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1971 ರಿಂದ ವಾದಿಯರು ದಾವಾ ಆಸ್ತಿಯಲ್ಲಿ ಕಬ್ಜೆ ಹೊಂದಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಕಬ್ಜೆಯಲ್ಲಿರುವ ವಿಚಾರವನ್ನು ಕಳೆದ 16 ವರ್ಷಗಳಿಂದ ನೋಡಿರುತ್ತೇನೆ.

<u>ಮರು ವಿಚಾರಣೆ ಇಲ್ಲ</u>

<u>(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ